**ದಿನಾಂಕಃ 20–01–2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಶ್ರೀ ಎಂ ಎಲ್ ಎನ್ ಎಚ್ ವಕೀಲರಿಂದ ಎದುರುದಾರನ ಪರವಾಗಿ**

3. ದೇವು ಬಾಬು ಗೌಡ ಮದುವೆಯಾಗಿದ್ದಾನೆ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ನಾನು ಇಲ್ಲಿಯ ತನಕ ಹಾಜರುಪಡಿಸಿಲ್ಲ ಎಂದರೆ ದಾಖಲಾತಿ ಆ ಬಗ್ಗೆ ಇರುವುದಿಲ್ಲ ಆದರೆ ಅವನ ಮದುವೆಯಾಗಿದೆ . ನನ್ನ ತಾಯಿ ಮತ್ತು ದೇವು ಬಾಬು ಗೌಡ ಒಟ್ಟಾಗಿ ಸಂಸಾರ ಮಾಡಿದ ಬಗ್ಗೆ ನಾನು ಪಡಿತರ ಚೀಟಿ ಅಥವಾ ಬೇರೆ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ . ನಾನು ವಂಶವೃಕ್ಷ ದಾಖಲಾತಿಯನ್ನು ಬಿಟ್ಟರೆ ಬೇರೆ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ನಾನು ಜೊತೆಗೆ ಮರಣ ಸಮರ್ಥನಾ ಪತ್ರದ ನಕಲನ್ನು ಹಾಜರುಪಡಿಸಿದ್ದೇನೆ . ನಾನು ಮೇಲ್ಕಂಡ ದೇವು ಬಾಬು ಗೌಡ ಮತ್ತು ದೇವಿರವರ ಮಗ ಎನ್ನುವ ಬಗ್ಗೆ ನನ್ನ ಶಾಲಾ ದಾಖಲಾತಿ ಇದೆ . ಅದನ್ನು ನಾನು ಹಾಜರುಪಡಿಸಿಲ್ಲ ಎಂದರೆ ನಾನು ಅದರ ನೆರಳಚ್ಚು ಪ್ರತಿಯನ್ನು ಹಾಜರುಪಡಿಸಿದ್ದೇನೆ . ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ . ನನ್ನ ಅಕ್ಕ ಮಂಗಲಾ 4 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದಾಳೆ . ನಾನು ಹಾಜರುಪಡಿಸಿರುವ ವಂಶವೃಕ್ಷದಲ್ಲಿ ಇರುವ ವ್ಯಕ್ತಿಗಳಿಗೂ ಹಾಗೂ ದೇವು ಬಾಬು ಗೌಡನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ . ದೇವು ಬಾಬು ಗೌಡನಿಗೆ ಮತ್ತು ನಮಗೆ ಯಾವುದೇ ಸಂಬಂಧ ಇಲ್ಲದೇ ಇದ್ದರೂ ನನ್ನ ತಾಯಿ ದೇವಿ ಅವನ ಹೆಂಡತಿ ಹಾಗೂ ನಾನು ಮತ್ತು ನನ್ನ ಅಕ್ಕ ಅವನ ಮಕ್ಕಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ದೇವು ಬಾಬು ಗೌಡ ಮದುವೆಯಾಗದೇ ಮಕ್ಕಳು ಇಲ್ಲದೇ ಮೃತಪಟ್ಟಿದ್ದಾನೆ ಎಂದರೆ ಸರಿಯಲ್ಲ. ನಾವು ದೇವು ಬಾಬು ಗೌಡನಿಗೆ ವಾರಸುದಾರರು ಅಲ್ಲದೇ ಇದ್ದರೂ ನಿ .ಪಿ. 1 ಮತ್ತು 2 ದಾಖಲಾತಿಗಳನ್ನು ನಾವು ಸೃಷ್ಟಿ ಮಾಡಿಕೊಂಡು ನಾವು ಅವನ ವಾರಸುದಾರರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಿ.ಪಿ. 1 ಮತ್ತು 2 ನ್ನು ಇತ್ತೀಚಿಗೆ ಪಡೆದುಕೊಳ್ಳಲಾಗಿದೆ ಎಂದರೆ ಹೌದು . ಕರೋನಾ ಇದ್ದದ್ದರಿಂದ ಆ ದಾಖಲಾತಿಗಳನ್ನು ಪಡೆಯಲು ತಡ ಆಗಿರುತ್ತದೆ . ವಂಶವೃಕ್ಷ ಕೊಡಲು ಅರ್ಜಿ ಕೊಟ್ಟರೆ ತಹಶೀಲ್ದಾರರವರು ಸಂಬಂಧಪಟ್ಟ ಗ್ರಾಮ ಲೆಕ್ಕಾಧಿಕಾರಿಗೆ ಅರ್ಜಿಯನ್ನು ಕಳುಹಿಸುತ್ತಾರೆ ಮತ್ತು ಗ್ರಾಮ ಲೆಕ್ಕಾಧಿಕಾರಿ ಅಕ್ಕಪಕ್ಕದವರನ್ನು ಭೇಟಿ ಮಾಡಿ

ಅವರ ಹೇಳಿಕೆ ಪಡೆದು ಅವರ ಸಹಿ ಪಡೆದು ಪಂಚನಾಮೆ ಮಾಡುತ್ತಾರೆ ಮತ್ತು ನಂತರ ವರದಿ ಸಲ್ಲಿಸುತ್ತಾರೆ ಎಂದರೆ ಗ್ರಾಮ ಲೆಕ್ಕಾಧಿಕಾರಿ ಅಕ್ಕಪಕ್ಕದವರ ವಿಚಾರಣೆ ಮಾಡಿಲ್ಲ . ಗ್ರಾಮ ಲೆಕ್ಕಾಧಿಕಾರಿ ಮುಂದೆ ಸಂಬಂಧ ತೋರಿಸಲು ನಾನು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ವಂಶವೃಕ್ಷವನ್ನು ಕಚೇರಿಯಲ್ಲಿಯೇ ಕುಳಿತು ತಯಾರು ಮಾಡಿದ್ದಾರೆ ಮತ್ತು ಯಾರೂ ಅಕ್ಕಪಕ್ಕದವರನ್ನು ವಿಚಾರಣೆ ಮಾಡಿಲ್ಲ ಎಂದರೆ ತುರ್ತು ಇದ್ದ ಕಾರಣ ಕಚೇರಿಯಲ್ಲಿಯೇ ಅದನ್ನು ತಯಾರು ಮಾಡಿಕೊಟ್ಟಿದ್ದಾರೆ . ಈ ದಾಖಲಾತಿಗಳನ್ನು ಈ ಪ್ರಕರಣದಲ್ಲಿ ಬಿಟ್ಟರೆ ಬೇರೆ ಎಲ್ಲಿಯೂ ಹಾಜರುಪಡಿಸಿಲ್ಲ . ಈ ಕೇಸಿನ ಸಲುವಾಗಿ ನಿ.ಪಿ. 1 ಮತ್ತು 2 ನ್ನು ನಾನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ